ಶ್ರೀ ಕೆ. ಹೆಚ್. ರಂಗನಾಥ (ಶಿಕ್ಷಣ ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) –ಅದೇ–

ಈ) –ಅದೇ–

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಸಾರಿಗೆ ರಾಜ್ಯ ಮಂತ್ರಿಗಳು ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ೧೯೫೦ನೇ ಇಸವಿಯ ಕಂಪನಿ ಶಾಸನದ ೩೫ (೨)ನೇ ಕಲಮಿನ ಮೇರೆಗೆ ೧೯೮೮–೮೯ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೨೮ನೇ ವಾರ್ಷಿಕ, ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭಾಧ್ಯಕ್ಷರು.— ೧೯೮೮–೮೯ನೇ ಸಾಲಿನ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ೨೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ರಾಯಚೂರು, ಬೀದರ್, ಗುಲ್ಬರ್ಗ ಭಾಗಗಳಲ್ಲಿ ವಿಪರೀತ ಮಳೆಯಿಂದಾಗಿ ಆಗಿರುವ ಹಾನಿಯ ಬಗ್ಗೆ

ಶ್ರೀ ಪಿ. ಜಿ. ಆರ್. ಸಿಂಧ್ಯ (ವಿರೋಧ ಪಕ್ಷದ ಉಪ ನಾಯಕರು).— ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ತಮ್ಮ ಜೊತೆಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇನೆ. ಶುಕ್ರವಾರ ಈ ಸದನದಲ್ಲಿ ಚರ್ಚೆಯಾದಂತೆ ರಾಯಚೂರು, ಬೀದರ್, ಗುಲ್ಬರ್ಗ ಭಾಗಗಳಲ್ಲಿ ವಿಪರೀತವಾಗಿ ಮಳೆಯಾಗಿ ಹಾನಿಯಾಗಿದೆ. ಶುಕ್ರವಾರ ಮಾನ್ಯ ಮುಖ್ಯಮಂತ್ರಿಗಳು ಒಬ್ಬ ಮಂತ್ರಿಗಳನ್ನು ಆ ಭಾಗಕ್ಕೆ ಭೇಟಿ ಕೊಟ್ಟು ಬರಲು ಕಳುಹಿಸುತ್ತೇನೆಂದು ಹೇಳಿದ್ದರು. ಆ ಪ್ರಕಾರ ಒಬ್ಬ ಮಂತ್ರಿಗಳು ಹೋಗಿದ್ದಾರೆಂದು ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ. ನಾಲ್ಕು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಾನಿಯಾಗಿದೆಯೆಂದೂ ಅಲ್ಲಿನ ಜನಗಳಿಗೆ ತೊಂದರೆಯಾಗಿದೆಯೆಂದು ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸಚಿವರು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೆ ನೆಂದರೆ ಇದು ಮಹತ್ವವಾದ ವಿಚಾರ. ಇದು ಸದನದಲ್ಲಿ ಚರ್ಚೆಯಾಗಬೇಕು. ಮಾನ್ಯ ಮಂತ್ರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಬಂದಿರುವುದರಿಂದ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.— ಪ್ರಕೃತಿಯ ವಿಕೋಪಕ್ಕೆ ತುತ್ತಾದ ಜಿಲ್ಲೆಗಳ ಪರಿಸ್ಥಿತಿಯ ಬಗ್ಗೆ ಸದನಕ್ಕೆ ಆಗಿರುವ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ಸಚಿವರು ಬಂದ ತಕ್ಷಣ ಅವರು ಸದನದಲ್ಲಿ ಆ ಬಗ್ಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅವರು ಹೇಳಿಕೆ ಕೊಟ್ಟ ಮೇಲೆ ಚರ್ಚೆಗೆ ತಾವು ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು.— ಅವರು ಹೇಳಿಕೆ ಕೊಟ್ಟ ಮೇಲೆ ತಾನೆ ಚರ್ಚೆಗೆ ಅವಕಾಶ ಕೊಡುವುದು?